

ಬಂಡೆಯ ಮೇಲೆ ವಿಶ್ರಾಂತಿ ಪಡೆಯುತ್ತಿರುವ ಸ್ಪೈಡರ್ ಮ್ಯಾನ್ ಓತಿಕ್ಯಾತ



ಕಾಮಿಕ್ ಹೀರೊ ಸ್ಪೈಡರ್ ಮ್ಯಾನ್

# ಸ್ಪೈಡರ್ ಮ್ಯಾನ್ ಹೋಲುವ ಓತಿಕ್ಯಾತ

ಈ ಚಿತ್ರದಲ್ಲಿರುವ ಓತಿಕ್ಯಾತವನ್ನೊಮ್ಮೆ ನೋಡಿ. ಕಾಮಿಕ್ ಹೀರೊ ಸ್ಪೈಡರ್ ಮ್ಯಾನ್ ತರಹ ಕಾಣುವ ಈ ಅಪರೂಪದ ಓತಿಕ್ಯಾತ ಕಾಣಿಸಿದ್ದು, ಆಫ್ರಿಕಾ ದೇಶದಲ್ಲಿ.

ಇವು ಸಾಮಾನ್ಯವಾಗಿ ಗುಂಪುಗಳಲ್ಲಿ ವಾಸಿಸುತ್ತವೆ. ಗಂಡು ಓತಿಕ್ಯಾತ ಗುಂಪಿನ ನಾಯಕತ್ವ ವಹಿಸಿ ನಿರ್ದೇಶಿಸುತ್ತದೆ. ಗರಿಷ್ಠ 30 ಸೆಂ.ಮೀ ಉದ್ದ ಬೆಳೆಯುತ್ತದೆ.

ಈ ಸುಂದರವಾದ ಓತಿಕ್ಯಾತವನ್ನು ಕ್ಯಾಮೆರಾದಲ್ಲಿ ಸೆರೆಹಿಡಿದದ್ದು ಬ್ರೆಜಿಲ್ ದೇಶದ ವ್ಯಕ್ತಿ. 38 ವರ್ಷದ ಇವನ ಹೆಸರು ಸಾವೋ ಪೋಲೋ. ಇತ್ತೀಚೆಗೆ ಆತ ಪತ್ನಿ ಸಮೇತನಾಗಿ ಆಫ್ರಿಕಾ ದೇಶಕ್ಕೆ ಭೇಟಿ ಕೊಟ್ಟಿದ್ದನಂತೆ. ಅಲ್ಲಿ ಚಿರತೆಯ ಫೋಟೊ ತೆಗೆಯಲು ಬಹಳ ಹೊತ್ತಿನಿಂದ ಕಾಯುತ್ತಿದ್ದ ಈತನಿಗೆ ಎಷ್ಟು ಹೊತ್ತು ಕಾದರೂ ಚಿರತೆ ಬಾರದ್ದನ್ನು ಕಂಡು ನಿರಾಸೆ ಆಯಿತಂತೆ. ಇದ್ದಕ್ಕಿದ್ದಂತೆ ಬಲು ಅಪರೂಪದ ಈ ಓತಿಕ್ಯಾತ ಬಂಡೆಯ ಮೇಲೆ ಬಿಸಿಲಿಗೆ ಮೈಯೊಡ್ಡಿ ಕೂತಿರುವುದನ್ನು ಕಂಡು ಫೋಟೊ ಕ್ಲಿಕ್ಕಿಸಿದ್ದಾನೆ.

'ಚಿರತೆ ಇಂದಲ್ಲ ನಾಳೆ ಕಾಣಿಸುತ್ತದೆ. ಆದರೆ ಈ ನಾಚಿಕೆ ಸ್ವಭಾವದ ಓತಿಕ್ಯಾತ ಮನುಷ್ಯನ ಕಣ್ಣಿಗೆ ಬೀಳುವುದೇ ಕಡಿಮೆ. ಅಂತಹದರಲ್ಲಿ ಇದನ್ನು ಕಣ್ತುಂಬ ನೋಡುವ ಭಾಗ್ಯ ನಮ್ಮದಾಗಿರುವುದನ್ನು ನೆನೆದು ಹೆಮ್ಮೆಯಾಗುತ್ತಿದೆ ಎನ್ನುತ್ತಾರೆ' ಈ ಜೋಡಿ.

■ ಸುಭಾಸ ಯಾದವಾಡ





ಸ್ಪೈಡರ್ ಮ್ಯಾನ್ ಓತಿಕ್ಯಾತವನ್ನು ಸೆರೆಹಿಡಿದ ದಂಪತಿ